ಫೈರ್‌ಬ್ರಾಕ್ಸ್ ಸಬ್ ಡಿವೀರ್ಜ್.

ತಾರೀಖು 12ನೇ ಜುಲೈ 1887.

ಫೈರ್‌ಬ್ರಾಕ್ಸ್ ಸಬ್ ಡಿವೀರ್ಜ್ ಅತ್ತಿಕುಪ್ಪಾ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ "ಜೇಮಾರೆಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್ದಾರ್‌ರಾಗಲಿ ಆಥವಾ ಅಧಿಕಾರ ಹೊಂದಿದ ಮುಕ್ತಾರೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೀಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರಿಜಿಸ್ಟ್ರೀಷನ್ ನಂ.	ಬರದುಕೊಟ್ಟವನ ಹೆಸರು.	ಬರಸಿಕೊಂಡವನ ಹೆಸರು.	ದಸ್ತಾವೇಜನ್ನು ಪ್ರೆಸೆಂಟ್ ಮಾಡಿದ ತಾರೀಖು.	ರಿಜಿಸ್ಟ್ರೀಗೆ ಹಾಜರಾದ ತಾರೀಖು.	ರಿಜಿಸ್ಟ್ರೀಯಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1885-86ನೇ ಇಸವಿ ನಂಬರ್ 144	ಕನ್ನಂಬಾಡಿ ಕಸಬಾ ಗ್ರಾಮದಲ್ಲಿರುವ ಗಂಗಡಿಕಾರ ವಕ್ಕಲಿಗರ ಜಾತಿಕೊಪ್ಪಲ್ ಮರಿಗೌಡನ ಮಗ 35 ವರುಷದ ಜಿರಾಯತು ಕಸಬಿನ ವೆಂಕಟಗಿರಿಗೌಡ.	ಕನ್ನಂಬಾಡಿ ಕಸಬಾ ಗ್ರಾಮದಲ್ಲಿರುವ ಗಂಗಡಿಕಾರ ವಕ್ಕಲಿಗರ ಜಾತಿ ಕೊಮಾರಿ ಕೃಷ್ಣನ ಮರಿಗೌಡನ ಮಗ 21 ವರುಷದ ಜಿರಾಯಿತು ಕಸಬಿನ ಕೃಷ್ಣೇಗೌಡ	25—5—85	27—5—85	28—5—85	ಕನ್ನಂಬಾಡಿ ನಾಲಾಕೆರೆ ಕೆಳಗೆ ನನ್ನ ಅಂಣನ ಹೆಸರಿಗು ನನ್ನ ಹೆಸರಿಗು ಜಂಟ್ಟುಪಟ್ಟೀಯಾಗಿ ಬರುವ ತಾಹೆಹಂತ್ತದಲ್ಲಿ ಯಿರುವ ಪೂರ್ವಕ್ಕೆ ವೆಂಕಟಕೃಷ್ಣ ಶಾಸ್ತ್ರಿಗಳ ಗದ್ದಿ, ದಕ್ಷಿಣಕ್ಕೆ ಕಾವೇರಿ ನದಿ, ಪಶ್ಚಿಮಕ್ಕೆ ಡಿಟೋ ವೆಂಕಟಕೃಷ್ಣ ಶಾಸ್ತ್ರಿಗಳ ಗದ್ದಿ, ಉತ್ತರಕ್ಕೆ ಆಲೆಮನೆ ತಿಟ್ಟು ಈಮಧ್ಯೆ ಇರುವ ನಂಬರ್ 150ನೇ ಬೀಜವರೀ 0—5—4 ಕಂದಾಯ 3—6—0 ವುಳ್ಳ ತಾಕು ಒಂದು, ಪೂರ್ವಕ್ಕೆ ವೆಂಕಟಕೃಷ್ಣ ಶಾಸ್ತ್ರಿಗಳ ಗದ್ದಿ ದಕ್ಷಿಣಕ್ಕೆ ನಮ್ಮ ಗದ್ದಿ ರಾಮಚಿಕ್ಕ ವೆಂಕಟೇಗೌಡನ ಗದ್ದಿ, ಪಶ್ಚಿಮಕ್ಕೆ ಡಿಟೋ ಚಿಕ್ಕ ವೆಂಕಟೇಗೌಡನ ಗದ್ದಿ, ಉತ್ತರಕ್ಕೆ ನೀರು ಹೋಗುವ ಹಿಕ್ಕಲು, ಈ ಮಧ್ಯೆ ಇರುವ ನಂಬರ್ 15ನೇ ಬೀಜವರೀ 3 ಕಂದಾಯ 1 ವುಳ್ಳ ತಾಕು ಒಂದು ಜುಮ್ಲಾ ಯ ರಡು ತಾಕು ಗದ್ದಿಗಳನ್ನು ನಿನಗೆ ಕುದ್ದ್- ಖರೀದಿಗೆ ಕೊಟ್ಟು 200 ರೂಪಾಯಿಗಳು ತೆಗೆಯಕೊಂಡು ಯಿರುತ್ತೇನೆಂದು.

ಡಿ. ದೇವರಾಜೇ ಅರಸು,
ರಿಜಿಸ್ಟ್ರಾರ್.

ನಗರ್ ಡಿವೀರ್ಜ್.

ನಗರ್ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 60.

ಮೃತಪಟ್ಟ ಕಟ್ಟುಮನೀ ಬಾಹುದ್ದೀರ್ ಸಾಬನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ವಾನಂಬಾಡಿ ಅಬ್ದುಲ್‌ರಹಿಮ್ ಸಾಬನು, ಮೃತಪಟ್ಟ ಕಟ್ಟುಮನೀ ಬಾಹುದ್ದೀರ್ ಸಾಬಿಗೆ ಮಗನು ಆಗಬೇಕೆಂಬ ಹಕ್ಕುದಾರಿ ವೇಲಿ ಇವೆಮೋಗ್ಗಾ ಸ್ಥಳದ ವಾನಂಬಾಡಿ ಅಬ್ದುಲ್‌ರಹಿಮ್ ಸಾಬನು ಇವೆಮೋಗ್ಗಾ ವಾಸಸ್ಥರಾಗಿ ಮೃತಪಟ್ಟ ಕಟ್ಟುಮನೀ ಬಾಹುದ್ದೀರ್ ಸಾಬನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ನಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.